# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. :46 ಪ್ರಾ.ಸಾ. : 55**

| | | |
|---|---|---|
| ಸಾಕ್ಷಿಯ ಹೆಸರು | : | ಮಹೇಶ ಜಿ. ನಾಯ್ಕ |
| ತಂದೆಯ ಹೆಸರು | : | ಗಣಪತಿ ನಾಯ್ಕ |
| ವಯಸ್ಸು | : | 33 ವರ್ಷ |
| ಕೆಲಸ | : | ಸಿ.ಪಿ.ಸಿ.-815, ಕರಾವಳಿ ಕಾವಲು ಪಡೆ, ಹೊನ್ನಾವರ |
| ವಾಸ | : | ಹೊನ್ನಾವರ |

**ದಿನಾಂಕಃ 24-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ನವೆಂಬರ್ 2016 ರಿಂದ ನವೆಂಬರ್ 2022 ರವರೆಗೆ ಕಾರವಾರ ಶಹರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.23-10-2018 ಈ ಪ್ರಕರಣದ ತನಿಖಾಧಿಕಾರಿಯಾದ ಚಾಸಾ-69 ಶಿವಕುಮಾರ್ ರವರು ನನಗೆ ಈ ಪ್ರಕರಣದಲ್ಲಿ 2 ಮತ್ತು 3 ನೇ ಆರೋಪಿತರ ಭದ್ರಿಕೆಗೆ ನನ್ನನ್ನು ನೇಮಿಸಿರುತ್ತಾರೆ ಹಾಗೂ ತನಿಖಾ ಸಹಾಯಕನಾಗಿ ಕರ್ತವ್ಯ ನಿರ್ವಹಿಸುವಂತೆ ನೇಮಿಸಿರುತ್ತಾರೆ. ಅದೇ ದಿನ ಠಾಣೆಯಲ್ಲಿ ಮೃತ ಪ್ರೇಮ್ ಕುಮಾರನ ಸಂಬಂಧಿಕರು, 2 ಮತ್ತು 3 ನೇ ಆರೋಪಿಗಳು ಹಾಗೂ ಇಬ್ಬರು ಪಂಚರು ಹಾಜರಿದ್ದು, ತನಿಖಾಧಿಕಾರಿಯು 2 ಮತ್ತು 3 ನೇ ಆರೋಪಿತರನ್ನು ವಿಚಾರಣೆ ಮಾಡಿದಾಗ, 2 ನೇ ಆರೋಪಿಯು 1 ನೇ ಆರೋಪಿಯ ಸ್ನೇಹಿತನಾಗಿದ್ದು, 1 ನೇ ಆರೋಪಿಯು ಕಾರವಾರದ ಬೈತ್ಕೋಲ್ ನಲ್ಲಿ ಶಿಪ್ಪಿಂಗ್ ಏಜೆನ್ಸಿಯನ್ನು ನಡೆಸಿಕೊಂಡು ಬಂದಿದ್ದು, ಸದರಿ ಶಿಪ್ಪಿಂಗ್ ಏಜೆನ್ಸಿಗೆ ಸರಿಯಾದ ರೀತಿಯಲ್ಲಿ ಕೆಲಸ ಸಿಗದಂತೆ ಪ್ರೇಮ್ ಕುಮಾರನು ಅರ್ಜಿಗಳನ್ನು ಬರೆದು, 1 ನೇ ಆರೋಪಿಯ ಕೆಲಸಕ್ಕೆ ಅಡ್ಡಿಪಡಿಸುತ್ತಿದ್ದರಿಂದ 1 ನೇ ಆರೋಪಿಯು ಪ್ರೇಮ್ ಕುಮಾರನ ಮೇಲೆ ದ್ವೇಷ ಹೊಂದಿದ್ದು, ಆತನನ್ನು ಕೊಲೆ ಮಾಡಲು 2 ನೇ ಆರೋಪಿಯೊಂದಿಗೆ ಸಂಚು ರೂಪಿಸಿ, ಕೃತ್ಯಕ್ಕೆ ಬಳಸಲು 2 ನೇ ಆರೋಪಿಗೆ ಒಂದು ಮಾರುತಿ ಜೆನ್ ಕಾರನ್ನೂ ಸಹ ನೀಡಿದ್ದು, ಅದರಂತೆ

2 ನೇ ಆರೋಪಿಯು ತನ್ನ ಪರಿಚಯದವನಾದ 3 ನೇ ಆರೋಪಿಯೊಂದಿಗೆ ಸೇರಿಕೊಂಡು ಪ್ರೇಮ್ ಕುಮಾರನನ್ನು ಕೊಲೆ ಮಾಡುವ ಯೋಜನೆಯನ್ನು ರೂಪಿಸಿ, ಅದಕ್ಕೆ ಬೇಕಾದ ಕತ್ತಿಯನ್ನು ಮಾಡಲು ಕುಂಬಾರವಾಡದ ಸುರೇಶ ಆಚಾರಿ ಎನ್ನುವವರ ಬಳಿ ಕಬ್ಬಿಣದ ಪಟ್ಟಿಯನ್ನು ನೀಡಿದ್ದು, ಆನಂತರ ಕತ್ತಿಯನ್ನು ಪಡೆಯಲು ಹೋದಾಗ, ಸದರಿ ಸುರೇಶ ಆಚಾರಿ ಯವರು ಕತ್ತಿಯನ್ನು ತಯಾರು ಮಾಡಿಲ್ಲದ ಕಾರಣ, 2 ಮತ್ತು 3 ನೇ ಆರೋಪಿತರು ಈಗಾಗಲೇ ಮಾಡಿಟ್ಟಂತಹ ಒಂದು ಕತ್ತಿಯನ್ನು ಖರೀದಿಸಿಕೊಂಡು ಬಂದಿದ್ದು, ಆನಂತರ 2 ಮತ್ತು 3 ನೇ ಆರೋಪಿತರು ದಿ.15-10-2018 ರಂದು ಆಕಳಗವಿ ಅರಣ್ಯ ಪ್ರದೇಶಕ್ಕೆ ಹೋಗಿ ಕೃತ್ಯವೆಸಗಲು ಸ್ಥಳ ಪರಿಶೀಲನೆ ಮಾಡಿಕೊಂಡು ಬಂದು, ಆನಂತರ 2 ನೇ ಆರೋಪಿಯು ಪ್ರೇಮ್ ಕುಮಾರನಿಗೆ ಕರೆ ಮಾಡಿ, ಕಟ್ಟಿಗೆ ವ್ಯವಹಾರ ಹಾಗೂ ಗಾಂಜಾ ವ್ಯವಹಾರ ಕೊಡಿಸುವುದಾಗಿ ಹೇಳಿ ತನ್ನೊಂದಿಗೆ ಬರುವಂತೆ ಹೇಳಿದ್ದು, ಅದಕ್ಕೆ ಪ್ರೇಮ್ ಕುಮಾರನು ಮರುದಿನ ಬರುವುದಾಗಿ ಹೇಳಿದಂತೆ, 2 ನೇ ಆರೋಪಿಯು ಮರುದಿನ ಅಂದರೆ ದಿ.16-10-2018 ರಂದು ಕಾರವಾರದ ಸಂಡೇ ಮಾರ್ಕೆಟ್ ನಲ್ಲಿ ಒಂದು ಕತ್ತಿಯನ್ನು ಖರೀದಿಸಿ ನಂತರ ಪ್ರೇಮ್ ಕುಮಾರನಿಗೆ ಕರೆ ಮಾಡಿ, ಸಿವಿಲ್ ಆಸ್ಪತ್ರೆಯ ಹತ್ತಿರ ಬರುವಂತೆ ತಿಳಿಸಿದ್ದು, ಪ್ರೇಮ್ ಕುಮಾರನು ಮಧ್ಯಾಹ್ನ ಸಮಯಕ್ಕೆ ಸ್ಕೂಟರಿನಲ್ಲಿ ಸಿವಿಲ್ ಆಸ್ಪತ್ರೆಯ ಹತ್ತಿರ ಹೋಗಿದ್ದು, 2 ನೇ ಆರೋಪಿಯು ತನ್ನ ಕಾರಿನಲ್ಲಿ ಪ್ರೇಮ್ ಕುಮಾರನನ್ನು ಕರೆದುಕೊಂಡು ಉಳವಿಯ ಚೆಕ್ ಪೋಸ್ಟ್ ಬಳಿ ತನ್ನ ಕಾರನ್ನು ನಿಲ್ಲಿಸಿದ್ದು, ಅಲ್ಲಿಗೆ ಅದಾಗಲೇ 3 ನೇ ಆರೋಪಿಯು ತನ್ನ ಬೈಕಿನಲ್ಲಿ ಬಂದಿದ್ದು, ಆನಂತರ ಮೂವರೂ ಸಹ ಸುಮಾರು ಎರಡೂವರೆ ಕಾಲುನಡಿಗೆಯಲ್ಲಿ ಆಕಳಗವಿ ಅರಣ್ಯ ಪ್ರದೇಶಕ್ಕೆ ನಡೆದುಕೊಂಡು ಹೋಗಿದ್ದು, ಕೃತ್ಯ ನಡೆದ ಸ್ಥಳದಿಂದ 200 ಮೀ. ಹಿಂದೆ 3 ನೇ ಆರೋಪಿಯು 2 ನೇ ಆರೋಪಿ ಹಾಗೂ ಪ್ರೇಮ್ ಕುಮಾರನ ಕಣ್ಣಿಗೆ ಬಟ್ಟೆ ಕಟ್ಟಿ ಸ್ವಲ್ಪ ದೂರ ಕರೆದುಕೊಂಡು ಹೋದ ನಂತರ ಈಗಾಗಲೇ ಯೋಜನೆ ರೂಪಿಸಿದಂತೆ 3 ನೇ ಆರೋಪಿಯು 2 ನೇ ಆರೋಪಿಯ ಕಣ್ಣಿಗೆ ಕಟ್ಟಿದ್ದ ಬಟ್ಟೆಯನ್ನು ಬಿಚ್ಚಿ ಆನಂತರ 2 ಮತ್ತು 3 ನೇ ಆರೋಪಿತರು ಕತ್ತಿಗಳಿಂದ ಪ್ರೇಮ್ ಕುಮಾರನ ಮೇಲೆ ಹಲ್ಲೆ ಮಾಡಿ, ಕೊಲೆ ಮಾಡಿದ್ದು, ಪ್ರೇಮ್ ಕುಮಾರನು ಸತ್ತ ನಂತರ, ಆತನ ಶವವನ್ನು ಅಲ್ಲಿಯೇ ಬಿಟ್ಟು ಆತನ ಮೈಮೇಲಿದ್ದ ಬಟ್ಟೆ, ಪರ್ಸ್, ಶೂ, ಕತ್ತಿಗಳು ಮತ್ತು ಕಣ್ಣಿಗೆ ಕಟ್ಟಿದ ಬಟ್ಟೆಗಳನ್ನು 2 ನೇ ಆರೋಪಿಯು ಒಂದು ಬ್ಯಾಗಿನಲ್ಲಿ ಹಾಕಿಕೊಂಡು ತನ್ನ ಕಾರಿನಲ್ಲಿ ಗಣೇಶ ಗುಡಿಯ ಸೇತುವೆಯ ಬಳಿ ಹೋಗಿ ಅವುಗಳನ್ನು ನೀರಿನಲ್ಲಿ ಬಿಸಾಡಿದ್ದು ಹಾಗೂ 3 ನೇ ಆರೋಪಿಯು ಪ್ರೇಮ್ ಕುಮಾರನ ಚಿನ್ನದ ಚೈನ್ ನ್ನು

ತೆಗೆದುಕೊಂಡು ತನ್ನ ಬೈಕಿನಲ್ಲಿ ಮನೆಗೆ ಹೋಗಿರುವುದಾಗಿ ಹಾಗೂ ತಮ್ಮೊಂದಿಗೆ ಬಂದರೆ, ಶವ ಬಿದ್ದ ಸ್ಥಳ ಹಾಗೂ ಕೃತ್ಯಕ್ಕೆ ಸಂಬಂಧಿಸಿದ ಎಲ್ಲಾ ಸ್ಥಳಗಳನ್ನೂ ತೋರಿಸುವುದಾಗಿ ಹೇಳಿರುತ್ತಾರೆ.

2. ಆರೋಪಿತರ ಹೇಳಿಕೆಯ ಮೇರೆಗೆ ತನಿಖಾಧಿಕಾರಿಗಳು ಇಲಾಖೆಯ ಜೀಪ್ ಹಾಗೂ ವ್ಯಾನ್ ನಲ್ಲಿ ಪ್ರೇಮ್ ಕುಮಾರನ ಸಂಬಂಧಿಕರು, 2 ಮತ್ತು 3 ನೇ ಆರೋಪಿತರನ್ನು, ಇಬ್ಬರು ಪಂಚರನ್ನು ಮತ್ತು ಪೊಲೀಸ್ ಸಿಬ್ಬಂದಿಗಳನ್ನು ಆರೋಪಿತರು ತೋರಿಸಿದಂತೆ ವಾಹನಗಳಲ್ಲಿ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ. ನಮ್ಮೊಂದಿಗೆ ಜಿಲ್ಲಾಸ್ಪತ್ರೆಯ ವೈದ್ಯರು ಹಾಗೂ ಅವರ ಸಹಾಯಕರೂ ಸಹ ಆ್ಯಂಬುಲೆನ್ಸ್ ಮೂಲಕ ನಮ್ಮೊಂದಿಗೆ ಸ್ಥಳಕ್ಕೆ ಬಂದಿರುತ್ತಾರೆ. ನಾವು ಉಳವಿ ಚೆಕ್ ಪೋಸ್ಟ್ ತಲುಪಿದಾಗ, 2 ನೇ ಆರೋಪಿಯು ವಾಹನವನ್ನು ನಿಲ್ಲಿಸುವಂತೆ ಹೇಳಿದ ಮೇರೆಗೆ ನಾವು ವಾಹನಗಳನ್ನು ನಿಲ್ಲಿಸಿ, 2 ಮತ್ತು 3 ನೇ ಆರೋಪಿತರು ಕರೆದುಕೊಂಡು ಹೋದ ಸ್ಥಳಕ್ಕೆ ನಡೆದುಕೊಂಡು ಹೋಗಿರುತ್ತೇವೆ. ಸದರಿ ಪ್ರದೇಶದಲ್ಲಿದ್ದ ಸಿಮೆಂಟ್ ರಸ್ತೆಯಿಂದ ಮಣ್ಣಿನ ರಸ್ತೆಯಲ್ಲಿ ಸುಮಾರು ಎರಡೂವರೆ ಕಿ.ಮೀ. ವರೆಗೆ ನಡೆದುಕೊಂಡು ಹೋದ ನಂತರ ಅಲ್ಲಿ ಕಾಡಿನ ಕಾಲುದಾರಿಯಲ್ಲಿ ಸುಮಾರು ಒಂದೂವರೆ ಕಿ.ಮೀ. ನಡೆದುಕೊಂಡು ಮುಂದೆ ಹೋದಾಗ ಅಲ್ಲಿ ಒಂದು ಇಳಿಜಾರಿನ ಪ್ರದೇಶವಿದ್ದು, ಸ್ವಲ್ಪ ದೂರದಲ್ಲಿ ನಿಂತು 2 ಮತ್ತು 3 ನೇ ಆರೋಪಿತರು ಪ್ರೇಮ್ ಕುಮಾರನ ಶವ ಬಿದ್ದ ಸ್ಥಳವನ್ನು ತೋರಿಸಿರುತ್ತಾರೆ. ಆನಂತರ ನಾವೆಲ್ಲರೂ ಶವದ ಬಳಿ ಹೋಗಿ ನೋಡಿದಾಗ, ಶವವು ಅಂಗಾತವಾಗಿ ಬಿದ್ದಿದ್ದು, ಶವದ ಮೈಮೇಲೆ ಒಂದು ಚಡ್ಡಿಯಿದ್ದು, ಕುತ್ತಿಗೆ, ಬೆನ್ನು, ಎದೆಯ ಮೇಲೆ ಕತ್ತಿಯಿಂದ ಕಡಿದ ಗಾಯಗಳಾಗಿದ್ದವು ಹಾಗೂ ಸ್ವಲ್ಪ ಗಾಯಗಳಲ್ಲಿ ಹುಳುಗಳು ಕಂಡು ಬಂದಿದ್ದವು. ಶವದ ಪಕ್ಕದಲ್ಲಿ ತುಂಡಾದ ಬನಿಯಾನ್ ಹಾಗೂ ಒಂದು ತುಂಡಾದ ಹಸಿರು ಬಣ್ಣದ ಟೀ–ಶರ್ಟ್ ಸಹ ಬಿದ್ದಿದ್ದವು. ತನಿಖಾಧಿಕಾರಿಗಳು ಅವುಗಳನ್ನು ಪಂಚನಾಮೆಯಡಿ ಜಪ್ತುಪಡಿಸಿಕೊಂಡರು. ಶವ ಬಿದ್ದ ಸ್ಥಳವು ತೇವಾಂಶದಿಂದ ಕೂಡಿದ ಕಾರಣ, ರಕ್ತದ ಕಲೆಗಳು ಕಂಡುಬಂದಿರಲಿಲ್ಲ. ನಮ್ಮೊಂದಿಗೆ ಬಂದಿದ್ದ ಪ್ರೇಮ್ ಕುಮಾರನ ಶವವನ್ನು ನೋಡಿ ಗುರುತಿಸಿರುತ್ತಾರೆ.

3. ತನಿಖಾಧಿಕಾರಿಗಳು ಸ್ಥಳದಲ್ಲಿಯೇ ಪಂಚರ ಸಮಕ್ಷಮ ಶವ ಪಂಚನಾಮೆಯನ್ನು ಮಾಡಿರುತ್ತಾರೆ. ಆನಂತರ ನಮ್ಮೊಂದಿಗೆ ಬಂದಿದ್ದ ವೈದ್ಯರು ಶವಪರೀಕ್ಷೆಯನ್ನು ನಡೆಸಿರುತ್ತಾರೆ. ಪ್ರೇಮ್ ಕುಮಾರನನ್ನು ಹತ್ಯೆ ಮಾಡುವ ಪೂರ್ವದಲ್ಲಿ ಕಣ್ಣಿಗೆ ಬಟ್ಟೆ ಕಟ್ಟಿದ್ದ ಸ್ಥಳ ಹಾಗೂ 2 ನೇ ಆರೋಪಿಯು ಕಣ್ಣಿಗೆ ಕಟ್ಟಿದ್ದ ಬಟ್ಟೆಯನ್ನು ಬಿಚ್ಚಿ ಪ್ರೇಮ್ ಕುಮಾರನ ಮೇಲೆ ಆರೋಪಿತರು

ಹಲ್ಲೆ ಮಾಡಿದ ಸ್ಥಳದಲ್ಲಿ ತನಿಖಾಧಿಕಾರಿಗಳು ಪಂಚರ ಸಮಕ್ಷಮ ಪಂಚನಾಮೆ ಮಾಡಿದ್ದು, ತನಿಖಾಧಿಕಾರಿ ಹಾಗೂ ಪಂಚರು ಸೂಚಿಸಿದಂತೆ ನಾನು, ನಿಪಿ-18 ರಂತೆ ಪಂಚನಾಮೆಯನ್ನು ಬರೆದು ಸಹಿ ಮಾಡಿ, ತನಿಖಾಧಿಕಾರಿಗೆ ನೀಡಿರುತ್ತೇನೆ. ಸದರಿ ಸಹಿಯನ್ನು ನಿಪಿ-18(ಬಿ) ಎಂದು ಗುರುತಿಸಲಾಯಿತು.

4. ಸದರಿ ಪಂಚನಾಮೆಯ ನಂತರ ಅದೇ ದಿನ ತನಿಖಾಧಿಕಾರಿಗಳು 3 ನೇ ಆರೋಪಿಯು ಬೈಕ್ ನಿಲ್ಲಿಸಿಟ್ಟ ಜಾಗವಾದ 3 ನೇ ಆರೋಪಿಯು ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿದ್ದು, ತನಿಖಾಧಿಕಾರಿ ಹಾಗೂ ಪಂಚರು ಸೂಚಿಸಿದಂತೆ ನಾನು, ನಿಪಿ-21 ರಂತೆ ಪಂಚನಾಮೆಯನ್ನು ಬರೆದು ಸಹಿ ಮಾಡಿ, ತನಿಖಾಧಿಕಾರಿಗೆ ನೀಡಿರುತ್ತೇನೆ. ಸದರಿ ಸಹಿಯನ್ನು ನಿಪಿ-21(ಬಿ) ಎಂದು ಗುರುತಿಸಲಾಯಿತು. ನಂತರ 2 ನೇ ಆರೋಪಿಯು ಪ್ರೇಮ್ ಕುಮಾರನನ್ನು ಕಾರವಾರದಿಂದ ಜೆನ್ ಕಾರಿನಲ್ಲಿ ಕರೆದುಕೊಂಡು ಹೋಗಿ ಉಳವಿ ಚೆಕ್ ಪೋಸ್ಟ್ ಬಳಿ ಕಾರನ್ನು ನಿಲ್ಲಿಸಿಟ್ಟದ ಸ್ಥಳವನ್ನು 2 ನೇ ಆರೋಪಿಯು ತೋರಿಸಿದ್ದು, ತನಿಖಾಧಿಕಾರಿಯು ಪಂಚರ ಸಮಕ್ಷಮ ಪಂಚನಾಮೆ ಮಾಡಿದ್ದು, ತನಿಖಾಧಿಕಾರಿ ಹಾಗೂ ಪಂಚರು ಸೂಚಿಸಿದಂತೆ ನಾನು, ನಿಪಿ-24 ರಂತೆ ಪಂಚನಾಮೆಯನ್ನು ಬರೆದು ಸಹಿ ಮಾಡಿ, ತನಿಖಾಧಿಕಾರಿಗೆ ನೀಡಿರುತ್ತೇನೆ. ಸದರಿ ಸಹಿಯನ್ನು ನಿಪಿ-24(ಬಿ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ನಿಪಿ-19, 20, 22, 23, 25, 26 ರಂತೆ ಫೋಟೊಗಳನ್ನು ತೆಗೆದಿರುತ್ತಾರೆ. ಆನಂತರ ಆರೋಪಿತರ ಭದ್ರಿಕೆಯೊಂದಿಗೆ ಠಾಣೆಗೆ ಹಿಂದಿರುಗಿರುತ್ತೇನೆ. ಈ ಬಗ್ಗೆ ನಾನು ದಿ.25-10-2018 ರಂದು ತನಿಖಾದಿಚಕಾರಿಗೆ ಹೇಳಿಕೆ ನೀಡಿರುತ್ತೇನೆ. ನಿಪಿ-14 ಮತ್ತು 15 ಫೋಟೊಗಳಲ್ಲಿ ಸಾಕ್ಷಿಯು ಪ್ರೇಮ್ ಕುಮಾರನ ಶವವನ್ನು ಗುರುತಿಸಿರುತ್ತಾರೆ. ಪ್ರೇಮ್ ಕುಮಾರನ ಮೈಮೇಲಿದ್ದ ಎಂ.ಓ-10 ಚಡ್ಡಿಯನ್ನೂ, ಶವದ ಪಕ್ಕ ಬಿದ್ದಿದ್ದ ಎಂ.ಓ-8 ಬನಿಯಾನಿನ ತುಂಡು, ಎಂ.ಓ-9 ಟೀ-ಶರ್ಟ್ ತುಂಡನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದಿರುವ 2 ಮತ್ತು 3 ನೇ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ.ಎಲ್.ಎಸ್.ಕೆ ವಕೀಲರಿಂದಃ–**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ